11-

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>
<u>ಹೊಸದುರ್ಗ</u>

ಓ.ಎಸ್.**31/2020**
ಪಿ.ಡಬ್ಲೂ.**1**

ದಿನಾಂಕ.**15/04/2023.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ.ಹೆಚ್ ಎನ್.ಎಂ ., ವಕೀಲರಿಂದ **1** ರಿಂದ **3** ನೇ ಪ್ರತಿವಾದಿಗಳ ಪರವಾಗಿ:</u>

11. ನನ್ನ ಮಾವ ಹನುಮಂತಪ್ಪ ಹೊಸದುರ್ಗದಲ್ಲಿಯೆ ವಾಸವಾಗಿರುತ್ತಾರೆಂದರೆ ಸರಿ. ನನ್ನ ಮಾವ ನಿವೃತ್ತ ಮುಖ್ಯೋಪಾದ್ಯಾಯರು ಎಂದರೆ ಸರಿ. ನನ್ನ ಮಾವ ನಿವೃತಿಯಾಗಿ 5 ವರ್ಷಗಳಾಗಿರ ಬಹುದು. ನಿಮ್ಮ ಮಾವ ನಿವೃತಿಯಾಗಿ ಬಂದ ಹಣವನು ಸಾಲ ಕೊಡುತ್ತಿದ್ದರು ಮತ್ತು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

12. ನಿಮ್ಮ ಮಾವ 2018 ರಲ್ಲಿ 1 ನೇ ಪ್ರತಿವಾದಿಗೆ ಕಷ್ಟ ಇದ್ದ ಕಾರಣ ಅವರಿಗೆ 13 ಲಕ್ಷ ಸಾಲ ನೀಡಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ಕೊಟ್ಟಿರ ಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ನನ್ನ ಮಾವ ಸಾಲ ನೀಡಿದ ಸಮಯದಲ್ಲಿ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ನೀಡಿದ ಸಮಯದಲ್ಲಿ 1 ನೇ ಪ್ರತಿವಾದಿಯಿಂದ ನಾನು ಖಾಲಿ ಛಾಪಾ ಕಾಗದಕ್ಕೆ ಸಹಿ ಪಡೆದುಕೊಂಡಿರುತ್ತೇನೆನ್ನುವುದು ಸರಿಯಲ್ಲ.ಸದರಿ ಸಮಯದಲ್ಲಿ ನನ್ನ ಮಾವ 3 ನೇ ಪ್ರತಿವಾದಿಯಿಂದ ಸಹಿವುಳ್ಳ ಖಾಲಿ ಚೆಕ್ ನ್ನು ಭದ್ರತೆಗಾಗಿ ಪಡೆದಿರುತ್ತಾರೆಂದರೆ ಸರಿಯಲ್ಲ.

13. ಸಾಲ ನೀಡಿದ ಭದ್ರತೆಗೊಸ್ಕರ ಆಸ್ತಿಯನ್ನು ಅಡಇಡಬೇಕೆಂದು 1 ಮತ್ತು 3 ನೇ ಪ್ರತಿವಾದಿಗೆ ಹೇಳಿ ಅವರ ಸಹಿ ಇದ್ದ ಖಾಲಿ ಛಾಪಾ ಕಾಗದವನ್ನು ನಿಪಿ 1 ಕರಾರು ಪತ್ರದಂತೆ ನಾವೆ ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. 2018 ರಿಂದ ಈ ದಾವೆ ಹಾಕುವ ತನಕ ನಾನು ಮತ್ತು ನನ್ನ ಮಾವ ಒಟ್ಟಿಗೆ ಪ್ರತಿವಾದಿಗಳಿಂದ ಬಡ್ಡಿ ಪಡೆದಿರುತ್ತೇವೆಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ನಡುವೆ ದಾವಾ ಸ್ವತ್ತಿಗೆ ಸಂಬಂಧಿಸಿಂದತೆ ಯಾವುದೆ ಕ್ರಯದ ವ್ಯವಹಾರ ಆಗಿಲ್ಲ ಮತ್ತು ನಿಪಿ 1 ರಂತೆ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ

14. ನಿಪಿ 9 ಮತ್ತು 10 ಬ್ಯಾಂಕ್ ಸ್ಲಿಪ್ ಗಳು ದಿನಾಂಕ 04/09/2018 ರದ್ದು ಆಗಿರುತ್ತದೆಂದರೆ ಸರಿ. ಪ್ರತಿವಾದಿಗಳಿಗೆ ನೀಡಿದ 13 ಲಕ್ಷ ಹಣವನ್ನು ವಾಪಾಸ್ ನೀಡಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ ನಾನು ಯಾವುದೆ ಸಾಲ ನೀಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಜಮೀನಿಗೊಸ್ಕರ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ.

15. ನನಗೆ ಈಗ ತೋರಿಸಿದ ವಾಕಲತ್ ನಲ್ಲಿರುವ ಸಹಿ ನನ್ನದೆ ಆಗಿರುತ್ತದೆ. ವಕಾಲತ್ ನ್ನು ನಿಸಿ 1 ಎಂದು, ಸಾಕ್ಷಿಯ ಸಹಿಯನ್ನು ನಿಸಿ 1(ಎ) ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ವಾದ ಪತ್ರದಲ್ಲಿರುವ ಸಹಿ ನನ್ನದೆ ಆಗಿರುತ್ತದೆ ವಾದ ಪತ್ರವನ್ನು ನ್ನು ನಿಸಿ 2 ಎಂದು, ಸಾಕ್ಷಿಯ ಸಹಿಯನ್ನು ನಿಸಿ 2(ಎ) ಎಂದು ಗುರುತಿಸಲಾಯಿತು.

16. ಸಾಕ್ಷಿಗೆ ನಕಲು ಕರಾರು ಪತ್ರದ ಮೇಲೆ ನೀಲಿ ಶಾಹಿಯಲ್ಲಿ ಹಿಂಬರಹ ಬರೆದಿದ್ದು ಅದರಲ್ಲಿರುವ ಸಹಿ ನಿಮ್ಮದ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಕಲು ಕರಾರಿನಲ್ಲಿರುವ ಸಹಿ ನನ್ನದಾಗಿದ್ದು, ನೀಲಿ ಶಾಹಿಯಲ್ಲಿರುವ ಹಿಂಬರಹ ಮತ್ತು ಸಹಿ ನನ್ನದಾಗಿರುವುದಿಲ್ಲ ಅದನ್ನು ಕ್ರಿಯೇಟ್ ಮಾಡಿರುತ್ತಾರೆಂದು ನುಡಿಯುತ್ತಾರೆ

17. ಜುಲೈ 2020 ರಲ್ಲಿ ಪ್ರತಿವಾದಿ 13 ಲಕ್ಷ ಹಣ ಹಿಂದಿರುಗಿಸಿ ಕೊಟ್ಟಾಗ ಬರೆದುಕೊಟ್ಟ ಹಿಂಬರಹ ಮತ್ತು ರುಜು ಆಗಿರುತ್ತದೆಂದು ಸೂಚಿಸಲಾಗಿ ಸಾಕ್ಷಿ ನಾನು ಬರೆದುಕೊಟ್ಟಿಲ್ಲ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಪ್ರತಿವಾದಿಗಳು ಹಣ ಹಿಂದಿರುಗಿಸಿದಾಗ ಪ್ರತಿವಾದಿಗಳು ಮೂಲ ಕರಾರು ಪತ್ರವನ್ನು ಹಿಂದಿರುಗಿಸಿ ಎಂದು ಕೇಳಿದ್ದು, ಆಗ ಕಳೆದು ಹೋಗಿರುತ್ತದೆಂದು ಹೇಳಿರುತ್ತೀರಿ ಎಂದು ಸೂಚಿಸಲಾಗಿ ಸಾಕ್ಷಿ ಇದೆಲ್ಲಾ ಸುಳ್ಳು ಎಂದು ಹೇಳಿರುತ್ತಾರೆ.

18. ಜುಲೈ 2020 ರ ನಂತರ ಕೋವಿಡ್ ಇದ್ದ ಕಾರಣ ನಿಮ್ಮ ಮತ್ತು ಪ್ರತಿವಾದಿಗಳ ನಡುವೆ ಭೇಟಿಯಾಗಿಲ್ಲ ಎಂದು ಸೂಚಿಸಲಾಗಿ ಸಾಕ್ಷಿ 1 ನೇ ಪ್ರತಿವಾದಿ ಆಸ್ಪತ್ರೆಯಲ್ಲಿದ್ದು, ನಾವು ಆಗಾಗ ಫಾಲೋ ಆಪ್ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಆಸ್ಪತ್ರೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಪಿ 1 ಮೂಲ ಕರಾರು ಪತ್ರವನ್ನು ಪದೆ ಪದೆ ಕೇಳುತ್ತಾರೆಂಬ ಕಾರಣದಿಂದ ನಾನು ಅವರ ಸಂಪರ್ಕಕ್ಕೆ ಸಿಗಲಿಲ್ಲ ಎಂದರೆ ಸರಿಯಲ್ಲ. ದಾವೆ ಹಾಕುವ ಸಲುವಾಗಿಯೆ ನಿಪಿ 1 ರಿಂದ 11 ನ್ನು ಸೃಷ್ಟಿ ಮಾಡಿದ್ದೆವೆಂದರೆ ಸರಿಯಲ್ಲ.

19. ಸಿ ಸಿ 944/2020 ಮತ್ತು ಈ ದಾವೆ ಒಂದೆ ವ್ಯವಹಾರಕ್ಕೆ ಸಂಬಂಧಿಸಿದಾಗಿರುತ್ತದೆಂದರೆ ಸರಿಯಲ್ಲ. ಒಂದೇ ವ್ಯವಹಾರವಾಗಿದ್ದರೂ ನನ್ನ ಮಾವ ಚೆಕ್ ಕೇಸನ್ನು ಹಾಕಿ ಮತ್ತು ನಾನು ಈ ದಾವೆಯನ್ನು ಪ್ರತಿವಾದಿಗಳಿಗೆ ವಿನಾಕಾರಣ ತೊಂದರೆಕೊಡುತ್ತಿದ್ದವೆಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಹೊಲದ ಕ್ರಯದ ವ್ಯವಹಾರವೆ ಆಗಿಲ್ಲ ಎಂದರೆ ಸರಿಯಲ್ಲ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4** ಮತ್ತು **5** ನೇ ಪ್ರತಿವಾದಿಗಳು ಪಾಟೀ ಸವಾಲಿಗೆ ಸಮಯವಕಾಶ ಕೇಳಿರುತ್ತಾರೆ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.